ಓ.ಎಸ್. 18/2018 ಪಿ. ಡಬ್ಲ್ಯೂ.ನಂ. – 1

ದಿನಾಂಕಃ 23.06.2025 ರಂದು ಕರೆಯಿಸಿ ಪುನಃ ಪ್ರಮಾಣ ವಚನ ಭೋಧಿಸಲಾಯಿತು

ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಾದ ಶ್ರೀ. ಆರ್.ಕೆ ವಕೀಲರಿಂದ ರವರಿಂದ

ಯಾರದಾದರೂ ಜಮೀನು, ಮನೆ ಸರ್ಕಾರದಿಂದ ಡ್ಯಾಮ್ ಕಟ್ಟಲು ಮುಳುಗಡೆ ಆದರೆ ಸರ್ಕಾರ ಯಾರಿಗೆ ಎಷ್ಟು ಪರಿಹಾರ ನೀಡಿದೆ ಎನ್ನುವ ದಾಖಲಾತಿಗಳು ಇಟ್ಟುಕೂಳ್ಳುತ್ತದೆ ಎಂದರೆ ಸಾಕ್ಷಿ ನನ್ನ ತಂದೆಗೆ ಯಾವುದೇ ಪರಿಹಾರ ಬಂದಿರುವುದಿಲ್ಲ ಅದು ಒಡೆಯರಿಗೆ ಹೋಗಿರುತ್ತದೆ. ಪರಿಹಾರ ಬಂದಿದೆ ಎಂದು ನಾನು ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಪರಿಹಾರ ಬಂದಿದೆ ಎಂದು ನಾನು ಹಾಜರುಪಡಿಸಿದ ದಾಖಲಾತಿಗಳು ನನ್ನ ತಂದೆಗೆ ಬಂದ ದಾಖಲಾತಿಗಳಲ್ಲ ಭೂ ಮಾಲೀಕರಿಗೆ ಪರಿಹಾರ ಸಂದಾಯವಾದ ದಾಖಲಾತಿ ಎಂದರೆ ಸರಿ. ನನ್ನ ತಂದೆ ಮೃತರಾದ ನಂತರ ನನ್ನ ತಮ್ಮ ಕನ್ನಪ್ಪನ ಹೆಸರಿನಲ್ಲಿ ಖಾತೆ ಬದಲಾವಣೆ ಆಗಬೇಕು ಎಂದು ನಾನು ಮತ್ತು ಉಳಿದ ವಾದಿಗಳು ಅರ್ಜಿಯನ್ನು ನೀಡಿರುತ್ತೇವೆ ಎಂದರೆ ಸರಿಯಲ್ಲ. ಖಾತೆ ಬದಲಾವಣೆ ನನ್ನ ತಂದೆಯ ಹೆಸರಿನಿಂದ ಪ್ರತಿವಾದಿಯ ಹೆಸರಿಗೆ ಆಗಿದೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳೂ ಇಂದಿಗೂ ನನ್ನ ತಂದೆಯ ಹೆಸರಿನಲ್ಲೇ ಇದೆ.

ನಿಪಿ–1 ರ ಪ್ರಕಾರ ದಾವಾ ಸ್ವತ್ತು ಖಾತೆ ಬದಲಾವಣೆ ಆಗಿ ಪ್ರತಿವಾದಿಯ ಹೆಸರಿಗೆ ಬಂದಿದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ತಂದೆಯ ಹೆಸರಿನಲ್ಲೇ ಇದೆ ಹಾಗೂ ನಿಪಿ–1 ಸರಿ ಇಲ್ಲ ಎಂದು ಉತ್ತರಿಸುತ್ತಾರೆ. ನಿಪಿ–2 ರಂತೆ ಪ್ರತಿವಾದಿಯ ಹೆಸರಿನಲ್ಲಿ ದಾವಾ ಸ್ವತ್ತು ಹೋಗುವಂತೆ ಆದೇಶ ಮಾಡಲಾಗಿದೆ ಎಂದರೆ ಸಾಕ್ಷಿ ಅದು ಸುಳ್ಳು ಎಂದು ಉತ್ತರಿಸುತ್ತಾರೆ. ನಿಪಿ–1 ಮತ್ತು 2 ಅನ್ನು ನಾನು ಹಾಜರುಪಡಿಸಿರುವುದಿಲ್ಲ ಹಾಗೂ ಅದನ್ನು ನಾನು ಒಪ್ಪುವುದಿಲ್ಲ. ನಿಪಿ– 3 ರ ಪ್ರಕಾರ ದಾವಾ ಸ್ವತ್ತು ನಿಮ್ಮ ತಂದೆಯ ಹೆಸರಿನಲ್ಲಿ ಇದೆ ಎಂದು ಬರೆದಿದ್ದು ಅದನ್ನು ಒಪ್ಪುತ್ತೀರಾ ಎಂದರೆ ಸಾಕ್ಷಿ ಅದನ್ನು ನಾನು ಒಪ್ಪುವುದಿಲ್ಲ ಎಂದ ಉತ್ತರಿಸುತ್ತಾರೆ. ಎ.ಸಿ ಗೆ ನಾವು ಯಾವುದೇ ವೇಲ್ಮನವಿಯನ್ನು ಸಲ್ಲಿಸಿರುವುದಿಲ್ಲ ಅದನ್ನು ಪ್ರತಿವಾದಿಯೇ ಮಾಡಿರುತ್ತಾರೆ. ನಿಪಿ–4 ರ ಆದೇಶವನ್ನು ನಾನು ಒಪ್ಪುವುದಿಲ್ಲ.

ನನ್ನ ತೀರಿಕೊಂಡು ನಾಲ್ಕು ಐದು ವರ್ಷ ಆಗಿರಬಹುದು. ದಾವಾ ಆಸ್ತಿ ವಿಲ್ ಪ್ರಕಾರ ಪ್ರತಿವಾದಿಗೆ ಹೋದ ವಿಚಾರ ಯಾವಾಗ ಗೊತ್ತಾಯಿತು ಎಂದರೆ ಸಾಕ್ಷಿ ನನಗೆ ಇಸವಿ ನೆನಪಿರುವುದಿಲ್ಲ ಎಂದು ಉತ್ತರಿಸುತ್ತಾರೆ. ನನ್ನ ಹೆಸರಿನಲ್ಲಾಗಲೀ ನನ್ನ ಗಂಡನ ಹೆಸರಿನಲ್ಲಾಗಲೀ ಯಾವುದೇ ಜಮೀನು ಇರುವುದಿಲ್ಲ. ನನಗೆ ಪಡಿತರ ಚೀಟಿ ಇರುವುದಿಲ್ಲ. ನನ್ನ ವಾಸದ

ಮನೆಯ ವ್ಯಾಪ್ತಿ ಹೊಂದಿರುವ ಸೊಸೈಟಿ ಬಿಳಿಗಳಲ್ಲು ಸೊಸೈಟಿ. ಸೊಸೈಟಿಯಲ್ಲಿ ಕೃಷಿಗೆ ಸಂಬಂದಪಟ್ಟಂತ ಬೆಳೆ ಸಾಲ ಇತ್ಯಾದಿಗಳನ್ನು ಕೊಡುತ್ತಾರೆ ಎಂದರೆ ಸರಿ. ನನ್ನ ತಂದೆ 2003 ರರಲ್ಲಿ ಬಿಳಿಗಲ್ಲು ಸೊಸೈಟಿಯಲ್ಲಿ ಬೆಳೆ ಸಾಲ ಮಾಡಿರುತ್ತಾರೆ ಎಂದರೆ ಸರಿ. ಬ್ಯಾಂಕು ಸೊಸೈಟಿಯಲ್ಲಿ ಸಾಲ ಮಾಡುವುದಾದರೇ ಖಾತೆ ಇರಬೇಕು ಎಂದರೆ ಸರಿ. ಖಾತೆ ಇರುವವರೇ ಖುದ್ದಾಗಿ ಹೋಗಿ ಸಾಲವನ್ನು ಪಡೆಯಬೇಕಾಗುತ್ತದೆ ಎಂದರೆ ಸರಿ.

ನನಗೂ ನಮ್ಮ ತಂದೆಗೂ ಸಂಬಂದ ಚೆನ್ನಾ ಗಿ ಇರಲಿಲ್ಲ ಎಂದರೆ ಸರಿಯಲ್ಲ. ನಿಮ್ಮ ತಂದೆ ಮೃತರಾಗುವ ಎಷ್ಟು ಸಮಯದ ಮೊದಲು ನಿವು ನಿಮ್ಮ ತಂದೆಯೊಂದಿಗೆ ಮಾತನಾಡಿದ್ದೀರಿ ಎಂದರೆ ಸಾಕ್ಷಿ ನಾನು ದಿನಾ ಹೋಗುತ್ತಿದ್ದೆ ಎಂದು ಉತ್ತರಿಸುತ್ತಾರೆ. ಪ್ರತಿವಾದಿಗೂ ನನಗೂ ನ್ಯಾಯಾಲಯಕ್ಕೆ ದಾವೆ ಹಾಕಿದ ಬಳಿಕ ಮಾತುಕತೆ ಇರುವುದಿಲ್ಲ. ನನ್ನ ತಂದೆಗೆ ಆರೋಗ್ಯ ಸರಿ ಇರಲಿಲ್ಲ ಹಾಗೂ ಹಾಸಿಗೆಯಲ್ಲೇ ಇದ್ದರು ಎಂದು ನಾನು ಹೇಳಿರುವುದು ಸುಳ್ಳು ಎಂದರೆಸರಿಯಲ್ಲ. ನನ್ನ ತಂದೆ ಮೃತರಾಗುವ ಮೊದಲು ಆರಾಮವಾಗಿ ಓಡಾಡುತ್ತಿದ್ದರು ಎಂದರೆ ಸರಿಯಲ್ಲ. 3 ನೇ ವಾದಿ ನನ್ನ ತಂದೆಯನ್ನು ಆಸ್ಪತ್ರಗೆ ಕರೆದುಕೊಂಡು ಹೋಗಿ ಬರುತ್ತಿದ್ದರು. ಕಾರ್ಗಲ್ ಅಲ್ಲಿ ಡಾ.ವಿನೋದ್ ಅವರಿಗೆ ತೋರಿಸುತ್ತಿದ್ದರು. ಅವರು ಇನ್ನೂ ಕಾರ್ಗಲ್ ಅಲ್ಲೇ ಇದ್ದಾರೆ. ಈ ಬಗ್ಗೆ ವೈದ್ಯಕೀಯ ದಾಖಲೆಗಳು ಇರುತ್ತವೆ ಎಂದರೆ ಸಾಕ್ಷಿ 3 ನೇ ವಾದಿಯ ಬಳಿ ಇರುತ್ತವೆ ಎಂದು ಉತ್ತರಿಸುತ್ತಾರೆ. ನಾನು ಮತ್ತು 3 ನೇ ವಾದಿ ಚೆನ್ನಾಗಿದ್ದೇವೆ ಎಂದರೆಸರಿ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇರುವುದಿಲ್ಲ.

ನನ್ನ ತಂದೆಗೆ ವ್ಯವಹಾರ ಜ್ಞಾನ ಇತ್ತು ಎಂದರೆ ಸರಿ. ನಮ್ಮ ಏರಿಯಾ ಕಡೆ ಬೆಳೆದಿರುವ ಅಡಿಕೆಗಳನ್ನು ಎ.ಪಿ.ಎಂ.ಸಿ ಗೆ ಹಾಕುವುದು ತುಂಬಾ ಕಡಿಮೆ ಹಾಗೂ ಸದರಿ ಅಡಿಕೆಯನ್ನು ಚಿದಂಬರ ಭಟ್ಟರಿಗೆ ಮಾರಾಟ ಮಾಡುವುದು ವಾಡಿಕೆ ಎಂದರೆ ಸರಿ. ನನ್ನ ತಂದೆ ಸದರಿ ಅಡಿಕೆಯನ್ನು ಚಿದಂಬರ ಭಟ್ಟರಿಗೆ ಮಾರಾಟ ಅವರಿಂದಿ ಸಾಲವನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ತಂದೆ ಕೂಲಿ ಕೆಲಸ ಮಾಡುತ್ತಿರಲಿಲ್ಲ. ನನ್ನ ತಂದೆ ಖಾಯಿಲೆಗೆ ಬಿದ್ದಾಗಿನಿಂದ ಪ್ರತಿವಾದಿ ದಾವಾ ಸ್ವತ್ತಿನ ಸ್ವಾದೀನದಲ್ಲಿದ್ದಾರೆ. ನನ್ನ ತಂದೆ ತೀರಿದ ಬಳಿಕ ದಾವಾ ಸ್ವತ್ತಿನಲ್ಲಿ ನಾನಾಗಲೀ ಉಳಿದ ವಾದಿಗಳಾಗಲೀ ಸ್ವಾದೀನದಲ್ಲಿ ಇಲ್ಲ ಎಂದರೆ ಸಾಕ್ಷಿ ಈ ದಾವೆಯನ್ನ ಸಲ್ಲಿಸುವವರೆಗೆ ನಾನು ಹಾಗೂ ಉಳಿದ ವಾದಿಗಳು ದಾವಾ ಸ್ವತ್ತಿನ ನೆಟ್ಟಿ ಕೆಲಸಕ್ಕೆ ಹೋಗುತ್ತಿದ್ದೆವು ಎಂದು ಉತ್ತರಿಸುತ್ತಾರೆ.

ನನ್ನ ತಂದೆ ತೀರಿದ ದಿನ ನಾನು ಪ್ರತಿವಾದಿಯೊಂದಿಗೆ ದಾವಾ ಸ್ವತ್ತಿನ ಬಗ್ಗೆ ಮಾತುಕತೆ ಮಾಡಿರುತ್ತೇನೆ ಆದರೆ ಪ್ರತಿವಾದಿ ಒಪ್ಪಿರುವುದಿಲ್ಲ. ನಮ್ಮ ತಂದೆ ತೀರಿದ 13 ನೇಯ ದಿನಕ್ಕೆ ಮಾಡುವ ಕಾರ್ಯಕ್ರಮದಲ್ಲಿ ಮತ್ತೊಂದು ಬಾರಿ ನಾನು ದಾವಾ ಸ್ವತ್ತಿನ ಬಗ್ಗೆ ಮಾತುಕತೆ ಮಾಡಿರುತ್ತೇನೆ ಆದರೆ ಪ್ರತಿವಾದಿ ಒಪ್ಪಿರುವುದಿಲ್ಲ. ನನ್ನ ತಂದೆ ತೀರಿ 4–5 ವರ್ಷಗಳ ನಂತರ ನನ್ನ ತಾಯಿ ತೀರಿಕೊಂಡಿರುತ್ತಾರೆ. ನನಗೆ ದಿನಾಂಕ ನೆನಪಿರುವುದಿಲ್ಲ. ತಾಯಿ ಬದುಕಿರುವವರೆಗೂ ನಾನು ಹೋಗಿ ಮಾತನಾಡಿಸುತ್ತಿದ್ದೆ. ತಾಯಿ ತೀರಿದ ಬಳಿಕ ನಾನು ಈ ದಾವೆಯನ್ನು ಸಲ್ಲಿಸಿದ್ದರಿಂದ ಪ್ರತಿವಾದಿಯ ಮನೆಗೆ ಹೋಗಿರುವುದಿಲ್ಲ. ನನ್ನ ತಂದೆ ಬರೆಸಿಟ್ಟಿರುವ ವಿಲ್ ಅನ್ನು ನಾನು ಎ.ಸಿ ನ್ಯಾಯಾಲಯದಲ್ಲಿ ನೋಡಿರುತ್ತೇನೆ. ವಿಲ್ ಅಲ್ಲಿ ನನ್ನ ತಂದೆ ದಾವಾ ಸ್ವತ್ತನ್ನು ಪ್ರತಿವಾದಿಯ ಹೆಸರಿನಲ್ಲಿ ಬರೆದಿದ್ದಾರೆ ಎಂದು ಹೇಳಿರುತ್ತಾರಾ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಇಡುವಾಣಿ ಮಂಜುನಾಥ ನನಗೆ ಈ ವಿಚಾರ ತಿಳಿಸಿರುತ್ತಾರೆ.

ನನ್ನ ತಂದೆ ಸಾಯೋವರೆಗೂ ಅವರು ಆರೋಗ್ಯವಂತರಾಗಿದ್ದರು ಹಾಗೂ ಅವರ ಕಿವಿ, ಕಣ್ಣು ಹಾಗೂ ಜ್ಞಾಪಕ ಶಕ್ತಿ ಉತ್ತಮವಾಗಿತ್ತು ಎಂದೆರ ಸರಿಯಲ್ಲ. ನನ್ನ ತಂದೆ ಹೆಬ್ಬಟ್ಟು ಒತ್ತುತಿದ್ದರು, ಸಹಿ ಹಾಕುತ್ತಿರಲಿಲ್ಲ ಎಂದರೆ ಸರಿ. ವಿಲ್ ಅಲ್ಲಿ ಇರುವ ಹೆಬ್ಬೆಟ್ಟು ನನ್ನ ತಂದೆಯದ್ದು ಎಂದರೆ ಸರಿಯಲ್ಲ. ನಾನು ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ